ಕಾಣುತಿತ್ತು. ನಮ್ಮ ಮನೆ ಬಳಿ ಒಂದು ಸಾಯಿಬಾಬ ಮಂದಿರವಿತ್ತು. ಒಂದು ಬೆಳಗಿನ ಜಾವ ಅಲ್ಲೊಂದು ಭಜನೆಯ ಮೇಳ ಬಂತು... ಭಜನೆಯ ಸ್ವರ ಕ್ಷೀಣವಾಗಿ ಶುರುವಾಗಿ, ನಮ್ಮ ಮನೆಗೆ ಹತ್ತಿರಾಗಿ ಮತ್ತೆ ಕ್ಷೀಣವಾಗಿ ಹಾಗೆಯೇ ಕರಗಿ ಹೋಯಿತು... ನಾನು ಮಲಗಿದಲ್ಲೇ ಇದೆಲ್ಲ ನನ್ನ ಅನುಭವಕ್ಕೆ ಬಂದಿದ್ದು. ಆ ಭಜನೆಯ ಮಾಧುರ್ಯ, ಕಂಜರದ ಶಬ್ದ ಎಲ್ಲವು ನನ್ನಲ್ಲಿ ತುಂಬಾ ಹೊತ್ತು ಉಳಿದುಕೊಂಡಿತು. ಬೇಲಿಯ ಸಾಲಲ್ಲೊಮ್ಮೆ ಸಾವಿರಾರು ಸಂಖ್ಯೆಯಲ್ಲಿ ಅರಳಿದ ನೀಲಿ ಹೂಗಳನ್ನು ನೋಡಿದೆ... ಅದನ್ನು ನೋಡುತ್ತಲೇ ಇದ್ದುಬಿಡೋಣ ಅನಿಸಿತು.

ಎಂಟನೇ ತರಗತಿಯಲ್ಲಿದ್ದಾಗ ಎನ್‌ಸಿಸಿ ಪರೇಡ್‌ಗಾಗಿ ಸೂರ್ಯ ಮೂಡೋ ಹೊತ್ತಿಗೆ ಮನೆಯಿಂದ ಹೊರಟುಬಿಡ್ತಿದ್ದೆ. ಆಗ ದಾರಿಯಲ್ಲಿ ಸಾಲು ಮರಗಳ ನಡುವಿನಿಂದ ಹೊಮ್ಮುತ್ತಿದ್ದ ಪಕ್ಷಿಗಳ ಗಾನ, ರಾಘವೇಂದ್ರ ಸ್ವಾಮಿ ಮಠದಿಂದ ಕೇಳಿಸುತ್ತಿದ್ದ ಎಂ.ಎಸ್. ಸುಬ್ಬಲಕ್ಷ್ಮಿ ಅವರ ಸುಪ್ರಭಾತ, ರೇಡಿಯೊದಲ್ಲಿ ಕೇಳುತ್ತಿದ್ದ ಹಳೆಯ ಹಿಂದಿ, ಕನ್ನಡ ಚಿತ್ರಗೀತೆಗಳು, ಮನೆ ಬಳಿಯ ರಾಮಮಂದಿರದ ಭಜನೆಯ ಮಾಧುರ್ಯ ಹೀಗೆ ಈ ಎಲ್ಲ ನನ್ನ ಸುತ್ತಮುತ್ತಲ ಪರಿಸರದ ದೃಶ್ಯಾವಳಿ ಮತ್ತು ಶಬ್ದಾವಳಿಗಳು ನನ್ನಲ್ಲಿ ಒಂದು ರೀತಿಯ ಉದ್ದೀಪನೆಗೆ ಕಾರಣವಾಗುತ್ತಿದ್ದವು. ಇದ್ಯಾವುದನ್ನು ನಾನು ವಿವರಿಸಲಾರೆ... ಆದರೆ ಆ ಅನುಭೂತಿ ಇದೆಯಲ್ಲ... ಅದನ್ನು ಅನುಭವಿಸಿದ್ದೇನೆ.

ಹೀಗೆ ಮನೆಯೊಳಗಿನ ನೋವು ಅಥವಾ ಮನುಷ್ಯನ ಎಣೆಯಿಲ್ಲದ ದುಃಖ ಮತ್ತು ಶಿವಮೊಗ್ಗದ ನನ್ನ ಸೀಮಿತ ಪರಿಸರದಲ್ಲಿ ಸಂಭವಿಸುತ್ತಿದ್ದ ಪ್ರಕೃತಿಯ ಹತ್ತಾರು ವಿಸ್ಮಯಗಳು ನನ್ನ ಕಾವ್ಯಕ್ಕೆ ಪ್ರೇರಣೆಯಾಗಿರಬಹುದು. ಆದರೆ ನಿಜ ಹೇಳಬೇಕೆಂದರೆ ನಾನು ಇಂದಿಗೂ ಕಾವ್ಯ ಬರೆಯುತ್ತಿದ್ದೇನೆ ಎಂದುಕೊಂಡಿಲ್ಲ. ನಾನು ಬರೆಯೋದನ್ನು ಕಾವ್ಯ ಎಂದು ಕರೆಯಲಾರೆ. ಜಗತ್ತಿನ ಆಗುಹೋಗುಗಳಿಗೆ ನನ್ನದೊಂದು ಪ್ರತಿಕ್ರಿಯೆ ಅಷ್ಟೇ. ನಾನು ಬರೆಯುವ ಹೊತ್ತಿಗೆ ನವ್ಯ ಕಾವ್ಯ ಉತ್ತುಂಗದಲ್ಲಿತ್ತು. ಕವಿತೆ ಅಂದರೆ ಹೀಗೆ ಇರಬೇಕು. ಕವಿತೆಗೆ ಬಿಗಿಯಾದ ಬಂಧ ಇರಬೇಕು. ಅಂತೆಲ್ಲ ನಿಯಮಾವಳಿಗಳಿದ್ದವು. ಅವರ ಎದುರಿಗೆ ನಮ್ಮಂತವರು ಕವಿತೆ ಬರೆಯೋಕೆ ಸಾಧ್ಯವೇ ಇಲ್ಲ ಎಂಬಂತಹ ವಾತಾವರಣವಿತ್ತು. ಒಂದು ರೀತಿಯ ಕೀಳರಿಮೆ ಅನುಭವಿಸುತ್ತಿದ್ದೆವು. ಒಳಗಿನ ಹಲವು ಒತ್ತಡಗಳನ್ನು ಮೀರುವ, ಅದರಿಂದ ಪಾರಾಗುವ ದಾರಿಯಾಗಿ ನಾನು ನನ್ನದೂ ಒಂದು ನುಡಿ, ಮಾತು ಎಂದು ಬರೆಯುತ್ತಾ ಹೋದೆ. ಅದನ್ನು ಲೋಕ 'ಕವಿತೆ' ಎಂದಿತು.

- 'ಕರೆಯಿರೆ ಚಂದ್ರನನ್ನು ಭೂಮಿಗೆ' ಎಂದವರು ನೀವು. 'ಯಾಕೆ ಬಂದೆ ಯಾಕೆ ನಿಂದೆ ಕಿಟಕಿಯಲ್ಲಿ ಚಂದಿರ', 'ಪ್ರೀತಿಸದೆ ಇರಲಾರೆ ಚಂದ್ರನನ್ನು' ಎಂದವರೂ ನೀವೆ. ನಿಮ್ಮ ಪದ್ಯಗಳಲ್ಲಿ ಮತ್ತೆ ಮತ್ತೆ ಮೂಡಿ ಬರುವ ಚಂದಿರ ನಿಮಗೆ ಒಂದು ರೂಪಕವೋ? ಕವಿ ಸಮಯವೋ? ಸಜೀವ ಪಾತ್ರವೋ?

ಬಾಲ್ಯದಲ್ಲಿ ನಾನು ಬಹಳ ಅಂತರ್ಮುಖಿಯಾಗಿದ್ದೆ. ಮೌನಿಯಾಗಿದ್ದೆ. ನನ್ನ ಇಪ್ಪತ್ತೈದನೇ ವಯಸ್ಸಿನ ತನಕ ನಾನು ಬಹಳ ಕಡಿಮೆ ಮಾತಾಡ್ತಿದ್ದೆ. ತಮ್ಮನ ಅನಾರೋಗ್ಯದ ಕಾರಣಕ್ಕೆ ಅಪ್ಪಅಮ್ಮನ ಪೂರ್ತಿ ಗಮನ ಅವನ ಮೇಲಿದ್ದರಿಂದ ಮನೆಯಲ್ಲಿ ನಿರ್ಲಕ್ಷಿತ ಮಗುವಾಗಿದ್ದೆ. ಆದರೆ ನನಗೆ ಅಪರಿಮಿತ ಸ್ವಾತಂತ್ರ್ಯವಿತ್ತು. ಮನೆಯಲ್ಲಿ ಎಲ್ಲಿಗೆ ಹೋದೆ, ಎಲ್ಲಿಂದ ಬಂದೆ ಎಂದು ಯಾರೂ ಕೇಳ್ತಿರಲಿಲ್ಲ. ಶಿವಮೊಗ್ಗ ಆಗ ಅಪ್ಪಟ ಹಳ್ಳಿಯ ರೀತಿ ಇತ್ತು... ಬೆಟ್ಟ, ಬಯಲು, ನದಿ, ಕಾಲುವೆ ಎಲ್ಲವೂ ಇದ್ದವು. ರಾತ್ರಿಗಳಲ್ಲಿ ಉದ್ದಾನುದ್ದ ಆಕಾಶವೇ ಇತ್ತು. ಕಟ್ಟಡಗಳು ಆಕಾಶಕ್ಕೆ ಮರೆಯಾಗಿರಲಿಲ್ಲ. ನನಗೆ ಭಯ, ಆತಂಕ ಅನ್ನೋದು ಇರಲಿಲ್ಲ. ನಾನು ಬೆಳಿಗ್ಗೆ ಮನೆ ಬಿಟ್ಟರೆ ಅಲ್ಲೆಲ್ಲ ಅಲೆದು ರಾತ್ರಿ ಮನೆ ಸೇರುತಿದ್ದೆ. ಚಂದ್ರ ನನಗೆಂದಿಗೂ ಜಡ ಅನಿಸಲಿಲ್ಲ. ಅವನೊಂದು ಚೇತನ ಎನಿಸಿದ. ಅವನನ್ನು ನೋಡುವುದು